ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ ..... ಪುಟದ ಸಂಖ್ಯೆ —1—

..... ಕಡತದ ಸಂಖ್ಯೆ CAO/PA/699/17-18

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ವಿಷಯ: ಕುಡಿಯುವ ನೀರಿನ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಪಾಲಿಕೆ ವ್ಯಾಪ್ತಿಯಲ್ಲಿರುವ ಎಲ್ಲಾ 198 ವಾರ್ಡ್‌ಗಳಲ್ಲಿ ವಿವಿಧ ಲೆಕ್ಕಶೀರ್ಷಿಕೆ ಅಡಿಯಲ್ಲಿ ಅನುಮೋದನೆಗೊಂಡು ನಿರ್ವಹಿಸಿರುವ ಕಾಮಗಾರಿಗಳ ಬಿಲ್ಲುಗಳನ್ನು ಕೂಡಲೇ ಪಾವತಿಸುವ ಬಗ್ಗೆ.

ಉಲ್ಲೇಖ:1. ಮಾನ್ಯ ಆಯುಕ್ತರವರ ಕಛೇರಿ ಆದೇಶ ಸಂ:ಆ/ಪಿಆರ್/811/17-18 ದಿನಾಂಕ:08-05-2017

2. ದಿನಾಂಕ:26-04-2017ರಂದು ನಡೆದ ಪಾಲಿಕೆ ಸಭೆ ನಿರ್ಣಯ

3. ಮಾನ್ಯ ಆಯುಕ್ತರವರ ಕಛೇರಿ ಆದೇಶ ಸಂ:ಮುಲೆಅ/ಪಿಆರ್/ 4415/15-16 ದಿನಾಂಕ:05-05-2016

*****

1) • ಮೇಲ್ಕಂಡ ವಿಷಯ ಹಾಗೂ ಉಲ್ಲೇಖಗಳಂತೆ ಕುಡಿಯುವ ನೀರಿನ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಪಾಲಿಕೆ ವ್ಯಾಪ್ತಿಯಲ್ಲಿರುವ ಎಲ್ಲಾ 198 ವಾರ್ಡ್‌ಗಳಲ್ಲಿ ವಿವಿಧ ಲೆಕ್ಕಶೀರ್ಷಿಕೆ ಅಡಿಯಲ್ಲಿ ಅನುಮೋದನೆಗೊಂಡು ನಿರ್ವಹಿಸಿರುವ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಉಲ್ಲೇಖ (1) ರಲ್ಲಿ ಮಾನ್ಯ ಆಯುಕ್ತರು ಕಛೇರಿ ಆದೇಶ ಹೊರಡಿಸಿರುತ್ತಾರೆ.

2) • ಸದರಿ ಕಛೇರಿ ಆದೇಶದಲ್ಲಿ 2015-16 ಮತ್ತು 2016-17ನೇ ಸಾಲಿಗೆ ಲೆಕ್ಕಶೀರ್ಷಿಕೆ ಪಿ-1802 ಅಡಿಯಲ್ಲಿ ಪ್ರತಿ ಸಾಲಿಗೆ ಹಳೆ ವಾರ್ಡ್‌ಗೆ ತಲಾ ರೂ.15.00 ಲಕ್ಷಗಳು ಮತ್ತು ಹೊಸ ವಾರ್ಡ್‌ಗೆ ರೂ.40.00 ಲಕ್ಷಗಳಂತೆ ಅನುದಾನ ನೀಡಲಾಗಿರುತ್ತದೆ.

3) • ಕೇಂದ್ರ ಸರ್ಕಾರದ 14ನೇ ಹಣಕಾಸು ಆಯೋಗದಡಿಯಲ್ಲಿ 2015-16ನೇ ಸಾಲಿಗೆ ರೂ.2800.00 ಲಕ್ಷಗಳು ಹಾಗೂ 2016-17ನೇ ಸಾಲಿಗೆ ರೂ.3400.00 ಲಕ್ಷಗಳ ಅನುದಾನ ನೀಡಲಾಗಿದ್ದು, ಕ್ರಿಯಾಯೋಜನೆಯು ಸರ್ಕಾರದಿಂದ ಅನುಮೋದನೆಯಾಗಿರುತ್ತದೆ.

4) • ಪ್ರಸ್ತುತ ಬೇಸಿಗೆ ಬರಗಾಲದಿಂದ ಕುಡಿಯುವ ನೀರಿನ ವ್ಯವಸ್ಥೆಯಿಲ್ಲದೇ ಸಾರ್ವಜನಿಕರು ಪರದಾಡುವಂತಾಗಿದ್ದು, ಅಗತ್ಯಕ್ರಮಗಳನ್ನು ವಿಳಂಭವಾಗದೇ ತುರ್ತಾಗಿ ಕೈಗೊಂಡು ನೀರಿನ ಅಭಾವವನ್ನು ಕಡಿಮೆ ಮಾಡಲು ದಿನಾಂಕ:26-04-2017ರಂದು ನಡೆದ ಕೌನ್ಸಿಲ್ ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ.

5) • ಸದರಿ ಆದೇಶದ ಕಂಡಿಕೆ (2)ರಲ್ಲಿ : "ದಿನಾಂಕ:26-04-2017ರಂದು ನಡೆದ ಮಾಸಿಕ ಪಾಲಿಕೆ ಸಭೆಯಲ್ಲಿ ಪೂಜ್ಯ ಮಹಾಪೌರರು ಕುಡಿಯುವ ನೀರಿನ ಅಭಾವವನ್ನು ಕಡಿಮೆ ಮಾಡಲು ನಗರ ಪಾಲಿಕೆಯ ಹೊರ ವಲಯಗಳ ವ್ಯಾಪ್ತಿಯಲ್ಲಿ ಬರುವ 110 ಹಳ್ಳಿಗಳಲ್ಲಿ ಪ್ರತಿ ಹಳ್ಳಿಗೆ ಹೊಸದಾಗಿ ಒಂದು ಕೊಳವೆ ಬಾವಿಯನ್ನು ಕೊರೆಯಲು ಹಾಗೂ ಈ ಹಿನ್ನೆಲೆಯಲ್ಲಿ ಕುಡಿಯುವ ನೀರಿಗೆ ಸಂಬಂಧಿಸಿದ ಕಾಮಗಾರಿಗಳನ್ನು ಈಗಾಗಲೇ ಜಾಬ್ ಕೋಡ್ ನೀಡಿರುವ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡುವುದು ಕುಡಿಯುವ ನೀರಿನ ಪೈಪ್‌ಗಳ ಅಳವಡಿಕೆಗೆ ಅಗತ್ಯಕ್ರಮಗಳನ್ನು ಕೈಗೊಳ್ಳಲು ನಿರ್ದೇಶಿಸಲಾಗಿರುತ್ತದೆ".

6) • ಸದರಿ ಆದೇಶದ ಕಂಡಿಕೆ (3)ರಲ್ಲಿ : "ಪಾಲಿಕೆಯ ವ್ಯಾಪ್ತಿಯಲ್ಲಿ ಇರುವ ಎಲ್ಲಾ 198 ವಾರ್ಡ್‌ಗಳಲ್ಲಿ ಕುಡಿಯುವ ನೀರಿಗೆ ಸಂಬಂಧಿಸಿದಂತೆ ಕಾರ್ಯಗಳನ್ನು ತುರ್ತಾಗಿ ಆಧ್ಯತೆಯ ಮೇರೆಗೆ ಕೈಗೊಂಡು ಬಿಲ್ಲುಗಳನ್ನು ಕೂಡಲೇ ಪಾವತಿಸಲು ಹಾಗೂ ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡಿರುವ ಬಿಲ್ಲುಗಳನ್ನು ಡಿ.ಸಿ. ಬಿಲ್ಲುಗಳ ಮುಖಾಂತರ ಪಾವತಿಸಲು ಪಾಲಿಕೆಯ ಸಭೆಯಲ್ಲಿ

Scanned by CamScanner

ವಿಷಯ :

ಪುಟದ ಸಂಖ್ಯೆ —2—

ಕಡತದ ಸಂಖ್ಯೆ CA01/AR/698/17-18

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು
7)	ಸರ್ವಾನುಮತದಿಂದ ತೀರ್ಮಾನಿಸಲಾಗಿರುತ್ತದೆ. ಮುಂದುವರೆದಂತೆ ವಲಯದ ಮುಖ್ಯ ಅಭಿಯಂತರರು/ಕಾರ್ಯಪಾಲಕ ಅಭಿಯಂತರರು ಅಧಿಕಾರ ಪ್ರತ್ಯಾಯೋಜನೆಯಂತೆ 2016–17ನೇ ಸಾಲಿನ ನೀರು ಸರಬರಾಜು ಕಾಮಗಾರಿಗಳನ್ನು ಕೂಡಲೇ ನಿರ್ವಹಿಸಲು ಮತ್ತು 2017–18ರಲ್ಲಿ ಉದ್ದೇಶಿಸಿರುವ ನೀರು ಸರಬರಾಜು ಕಾಮಗಾರಿಗಳಿಗೆ ಜಾಬ್ ಕೋಡ್ ನಿರೀಕ್ಷಿಸಿ ಕೆಲಸಗಳನ್ನು ಪ್ರಾರಂಭಿಸಲು ಕೂಡಲೇ ಅಗತ್ಯ ಕ್ರಮಗಳನ್ನು ಜರುಗಿಸಿ ಮೆ.ಕೆ.ಆರ್.ಐ.ಡಿ.ಎಲ್. ಸಂಸ್ಥೆ ಮುಖಾಂತರ ನಿಯಮಗಳಂತೆ ಕೈಗೊಂಡು ತುರ್ತಾಗಿ ಅನುಷ್ಠಾನಗೊಳಿಸಲು ಆದೇಶಿಸಿದೆ." • *ಈ ಕೆಳಕಂಡ ಅಂಶಗಳನ್ನು ಅವಗಾಹನೆಗಾಗಿ ಸಲ್ಲಿಸಿದೆ :* 1. ಮಾನ್ಯ ಆಯುಕ್ತರವರ ಕಛೇರಿ ಆದೇಶ ಸಂ:ಮುಲೆಅ/ಪಿಆರ್/4415/15–16 ದಿನಾಂಕ:05–05–2016 ರಲ್ಲಿ BBMP Priority Categoryಯಲ್ಲಿ "ಕುಡಿಯುವ ನೀರಿಗೆ ಸಂಬಂಧಿಸಿದ ಕಾಮಗಾರಿಗಳಿಗೆ" ಪಾವತಿಸಲು ಅವಕಾಶ ಕಲ್ಪಿಸಲಾಗಿದ್ದು ಅದರಂತೆ ಪ್ರಸ್ತುತ ಪಾವತಿಗೆ ಕ್ರಮವಹಿಸಲಾಗಿರುತ್ತದೆ.
8)	
9)	2. ಸದರಿ Categoryಯಲ್ಲಿ ಪಾಲಿಕೆ ಅನುದಾನದ ಆಯವ್ಯಯದ ವಿವಿಧ ಲೆಕ್ಕಶೀರ್ಷಿಕೆ ಅಡಿಯಲ್ಲಿ ಜಾಬ್ ಕೋಡ್ ಪಡೆದು ಟೆಂಡರ್ ಮೂಲಕ ಗುತ್ತಿಗೆದಾರರು ಹಾಗೂ ಕೆ.ಆರ್.ಐ.ಡಿ.ಎಲ್. ಮೂಲಕ ನಿರ್ವಹಿಸಿದ ಕುಡಿಯುವ ನೀರಿಗೆ ಸಂಬಂಧಿಸಿದ ಕಾಮಗಾರಿಗಳಾದ : ಬೋರ್‌ವೆಲ್ ಕೊರೆಯುವುದು ಟ್ಯಾಂಕರ್ ಮೂಲಕ ನೀರು ಸರಬರಾಜು ಪೈಪ್‌ಲೈನ್ ಅಳವಡಿಸುವುದು ನೀರು ಸರಬರಾಜು ನಿರ್ವಹಣೆ ಕಾಮಗಾರಿಗಳ ಬಿಲ್ಲುಗಳು ಪಾವತಿಗೆ ಬಾಕಿಯಿರುತ್ತವೆ.
10)	3. 14ನೇ ಹಣಕಾಸು ಹಾಗೂ ರಾಜ್ಯ ಸರ್ಕಾರದ ಅನುದಾನದಲ್ಲಿ ನಿರ್ವಹಿಸಿದ ಕುಡಿಯುವ ನೀರಿನ ಕಾಮಗಾರಿಗೆ ಸಂಬಂಧಿಸಿದ ಬಿಲ್ಲುಗಳು ಆಯಾ Categoryಯಲ್ಲಿ ತುರ್ತಾಗಿ ಪಾವತಿ ಮಾಡಲು ಅವಕಾಶವಿರುತ್ತದೆ.
11)	• ಮೇಲ್ಕಂಡ ಅಂಶಗಳನ್ನು ಅವಗಾಹನೆಗೆ ತರುತ್ತಾ ಪಾಲಿಕೆ ಅನುದಾನದ ಆಯವ್ಯಯದ ವಿವಿಧ ಲೆಕ್ಕಶೀರ್ಷಿಕೆ ಅಡಿಯಲ್ಲಿ ಜಾಬ್ ಕೋಡ್ ಪಡೆದು ಟೆಂಡರ್ ಮೂಲಕ ಗುತ್ತಿಗೆದಾರರು ಹಾಗೂ ಕೆ.ಆರ್.ಐ.ಡಿ.ಎಲ್. ಮೂಲಕ ನಿರ್ವಹಿಸಿದ ಕುಡಿಯುವ ನೀರಿಗೆ ಸಂಬಂಧಿಸಿದ ಕಾಮಗಾರಿಗಳಾದ : ಬೋರ್‌ವೆಲ್ ಕೊರೆಯುವುದು ಟ್ಯಾಂಕರ್ ಮೂಲಕ ನೀರು ಸರಬರಾಜು ಪೈಪ್‌ಲೈನ್ ಅಳವಡಿಸುವುದು ನೀರು ಸರಬರಾಜು ನಿರ್ವಹಣೆ ಹಾಗೂ ಕುಡಿಯುವ ನೀರು ಸರಬರಾಜಿಗೆ ಸಂಬಂಧಿಸಿದ ಇತ್ಯಾದಿ ಕಾಮಗಾರಿಗಳ ಬಿಲ್ಲುಗಳು ಜೇಷ್ಠತೆ ಆಧಾರದ ಮೇಲೆ ಭಿತ್ತರಿಸುವುದರಿಂದ BBMP Priority Categoryಯಲ್ಲಿ ತುರ್ತಾಗಿ ಪಾವತಿ ಮಾಡಲು ಅವಕಾಶವಿರುವುದಿಲ್ಲ.
12)	• ಆದ್ದರಿಂದ ಪಾಲಿಕೆ ಅನುದಾನದ ವಿವಿಧ ಲೆಕ್ಕಶೀರ್ಷಿಕೆಗಳಡಿಯಲ್ಲಿ ನಿರ್ವಹಿಸಿ ಪಾವತಿಗೆ ಬಾಕಿಯಿರುವ ಕುಡಿಯುವ ನೀರಿಗೆ ಸಂಬಂಧಿಸಿದ ಎಲ್ಲಾ ಕಾಮಗಾರಿಗಳ ವಿವರಗಳನ್ನು ಸಂಬಂಧಪಟ್ಟ ವಿಭಾಗೀಯ ಕಛೇರಿಗಳಿಂದ ಪಡೆದು ಪಾವತಿಸಲು ಸಮಾಯಾವಕಾಶ ಬೇಕಾಗಿರುವುದರಿಂದ **ಪ್ರಸ್ತುತ ಪಿ–1802 ಅಡಿ** ನಿರ್ವಹಿಸುವ ಕುಡಿಯುವ ನೀರಿನ ಕಾಮಗಾರಿಗಳ ವಿವರಗಳನ್ನು ಐ.ಎಫ್.ಎಂ.ಎಸ್.ನಿಂದ

Scanned by CamScanner

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ ..... ಪುಟದ ಸಂಖ್ಯೆ -3-

..... ಕಡತದ ಸಂಖ್ಯೆ CAO/DR/698/17-18

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಪಡೆಯಲಾಗಿದ್ದು, ಅದರಂತೆ, ರೂ.202926121/-ಗಳ ಪಾವತಿಗೆ ಬಾಕಿಯಿದ್ದು (ಮೆ.ಕೆ.ಆರ್.ಐ.ಡಿ.ಎಲ್. ಸಂಸ್ಥೆ ವತಿಯಿಂದ ನಿರ್ವಹಿಸಿದ ಕಾಮಗಾರಿಯ ಮೊತ್ತ ರೂ.8107135/-, ಇತರೆ ಗುತ್ತಿಗೆದಾರರಿಂದ ನಿರ್ವಹಿಸಿದ ಕಾಮಗಾರಿಯ ಮೊತ್ತ ರೂ.194818986/-) ಕಾಮಗಾರಿಗಳ ವಿವರವಾದ ಪಟ್ಟಿ ಲಗತ್ತಿಸಿದೆ. ಸದರಿ ಬಿಲ್ಲುಗಳನ್ನು ಕೂಡಲೇ ಪಾವತಿಸಲು ಮುಂದಿನ ಸೂಕ್ತ ಆದೇಶಕ್ಕಾಗಿ ಸಲ್ಲಿಸಿದೆ.

ಮುಖ್ಯ ಲೆಕ್ಕಾಧಿಕಾರಿಗಳು

13) ಮಾನ್ಯ ವಿಶೇಷ ಆಯುಕ್ತರು (ಹಣಕಾಸು) 25/5/17

14) Hon-comm) under Comm. Category.

COMMISSIONER
Bruhat Bengaluru Mahanagara Palike

15) CAO)

ಪಂಕ್ತಿ (14) ರಲ್ಲಿ ಮಾನ್ಯ ಕಾರ್ಯಪ್ಪರವರು ತಿಳಿಸಿರುವಂತೆ— ಪಡೆಯಲಾದ ಕಾಮಗಾರಿಗಳ ಮೊತ್ತ ಪಾವತಿ ಬಾಕಿ ಇರುವ ಕಾಮಗಾರಿಗಳ ಕೆಲಸ ಪೂರ್ಣಗೊಳಿಸಲು ತಿಳಿಸಲಾಗಿದೆ. 30/5/17

16) ಮಾ.ವಿ.ಕಾರ್ಯ

ಮಾ.ವಿ.ಕಾರ್ಯರವರು CAO ರವರೇ ನಿರ್ಧರಿಸಲು ತಿಳಿಸಿರುವುದರಿಂದ, ಮಾನ್ಯ ಕಾರ್ಯಪ್ಪರ (ಪಂಕ್ತಿ 14) ತೀರ್ಮಾನವನ್ನು ಸಿಂಧುಗೊಳಿಸಲಾಗಿದೆ. 30/5/17

Scanned by CamScanner